# ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲ-571440

## ವರದಿ

## ಭರವಸೆಯೇ ಬಾಳಿನ ಬೆಳಕಾಗಲಿ – ಪ್ರೊ ಕುಮಾರ್

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ

**ಕೊಳ್ಳೇಗಾಲ 09-02-2018 :** ಜೀವನ ಹಲವಾರು ಏಳು-ಬೀಳುಗಳ ಸಮ್ಮಿಲನ. ನಾವು ಎದುರಿಸಬೇಕಾದ ಹಲವಾರು ಕಷ್ಟಗಳು ಬಂದಾಗ ಅವುಗಳನ್ನು ಆತ್ಮವಿಶ್ವಾಸದಿಂದ ಮೆಟ್ಟಿ ನಿಲ್ಲುವಂತಹ ಭರವಸೆ ನಮ್ಮಲಿರಬೇಕು. ಭರವಸೆಯಿದ್ದಲ್ಲಿ ಬಾಳು ಎಂದೂ ಕತ್ತಲಾಗುವುದಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯರಾದ ಹಾಗೂ ನಿವೃತ್ತ ಪ್ರಾಚಾರ್ಯರಾದ ಪ್ರೊ. ಕುಮಾರ್ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಹಾಗೂ ನಿರ್ವಹಣಾಶಾಸ್ತ್ರ ವಿಭಾಗಗಳಿಂದ ಆಯೋಜಿಸಿದ ಜೀವನದಲ್ಲಿನ ಸವಾಲುಗಳು ಮತ್ತು ಎದುರಿಸುವ ಮಾರ್ಗಗಳು ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡುತ್ತ ಮಾತನಾಡಿದರು.

ಇಂದು ಒಂದು ಸಣ್ಣ ಸಮಸ್ಯೆ ಅಥವಾ ತಾತ್ಕಾಲಿಕ ಹಿನ್ನಲೆಯಾದೊಡನೆ ಯುವ ಸಮೂಹವು ಸೋಲೊಪ್ಪಿಕೊಂಡು ಜೀವನವೇ ಮುಗಿಯಿತು ಎನ್ನುವ ನಿರ್ಧಾರಕ್ಕೆ ಬರುತ್ತಿರುವುದು ದುರ್ದೈವ. ಜೀವನದಲ್ಲಿ ಇಂತಹ ಸಮಸ್ಯೆ ಅಥವಾ ಕಷ್ಟಗಳನ್ನೇ ಮೆಟ್ಟಿಲಾಗಿ ಪರಿವರ್ತಿಸಿಕೊಂಡು ಉನ್ನತ ಸ್ಥಾನ ಮುಟ್ಟಲು ಭರವಸೆಯೊಡನೆ ಮುನ್ನುಗ್ಗುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು

ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕರಾದ ಶ್ರೀ ಮಠ ಮಲ್ಲಿಕಾರ್ಜುನರವರು ವಿದ್ಯಾರ್ಥಿಗಳಾದ ತಾವು ವಿವೇಕತೆಯುಳ್ಳವರು, ದೂರದೃಷ್ಠಿಯುಳ್ಳವರು ಜೊತೆಗೆ ಸುಭದ್ರ ದೇಶವನ್ನು ಕಟ್ಟುವ ಶಿಲ್ಪಿಗಳು. ಒತ್ತಡದಲ್ಲಿ ತಾರ್ಕಿಕವಾಗಿ ಯೋಚಿಸಬಲ್ಲ ಕ್ಷಮತೆ, ಸೋಲನ್ನು ಒಪ್ಪದ ಮನೋಭಾವ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಪ್ರಾಚಾರ್ಯ ಪ್ರೊ. ಉಮೇಶ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರೊ. ಸುರೇಶ ಸ್ವಾಗತಿಸಿ ವಂದಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯರಾದ ಹಾಗೂ ನಿವೃತ್ತ ಪ್ರಾಚಾರ್ಯರಾದ ಪ್ರೊ. ಕುಮಾರ್‌ರವರು ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಡಾ. ಎಂ. ಪ್ರಭು, ಶ್ರೀ ಮಠ ಮಲ್ಲಿಕಾರ್ಜುನ ಹಾಗೂ ಪ್ರಾಚಾರ್ಯ ಪ್ರೊ. ಉಮೇಶರವರನ್ನು ಕಾಣಬಹುದು.



ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯರಾದ ಹಾಗೂ ನಿವೃತ್ತ ಪ್ರಾಚಾರ್ಯರಾದ ಪ್ರೊ. ಕುಮಾರ್‌ರವರು ವಿಶೇಷ ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಡಾ. ಎಂ. ಪ್ರಭು, ಶ್ರೀ ಮಠ ಮಲ್ಲಿಕಾರ್ಜುನ ಹಾಗೂ ಪ್ರಾಚಾರ್ಯ ಪ್ರೊ. ಉಮೇಶರವರನ್ನು ಕಾಣಬಹುದು.



ವಿಶೇಷ ಉಪನ್ಯಾಸದಲ್ಲಿ ಭಾಗವಹಿಸಿರುವ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು

